ವಂತಹ ಮತ್ತು ಸದರಿ ಆಂಗಡಿ ನಡೆಯುವುದರಿಂದ ದೇವಸ್ಥಾನಗಳ ಪಾವಿತ್ರ್ಯತೆಗೆ ಮತ್ತು ಕಾಲನಿಗಳ ಶಾಂತತೆಗೆ ಭಂಗ ಉಂಟಾಗುವುದಿಲ್ಲವೆಂದು ಕಂಡುಬಂದರೆ, ಅಂತಹ ಸ್ಥಳಗಳಿಗೆ ಪರವಾನಿಗೆಗಳನ್ನು ಕೊಡಲಾಗಿದೆ.

ಊ) ಉತ್ತರ (ಈ) ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಅಂತಹ ಪ್ರಕರಣಗಳು ಇರುವುದಿಲ್ಲ.

ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯನ್ನು ಬೇರೆ ಬೇರೆ ವಿಭಾಗಗಳನ್ನಾಗಿ ವಿಂಗಡಿಸುವುದು.

೪೭೪. ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯನ್ನು ಬೇರೆ ಬೇರೆ ಸಂಸ್ಥೆಗಳನ್ನಾಗಿ ವಿಭಜಿಸಬೇಕೆಂದು ಸರ್ಕಾರದವರು ಯೋಚಿಸುತ್ತಿದೆಯೇ;

ಆ) ಬೆಂಗಳೂರು ಸಾರಿಗೆ ಸಂಸ್ಥೆಯನ್ನು ಬೇರೆ ಸಂಸ್ಥೆಯನ್ನಾಗಿ ಮಾಡಲು ಯೋಚನೆಯಿದೆಯೇ;

ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಈ) ಈ ಯೋಚನೆ ಸರಿಯಿಲ್ಲವೆಂಬ ಅಭಿಪ್ರಾಯವನ್ನು ಕೆ.ಎಸ್.ಆರ್.ಟಿ.ಸಿ. ಯಲ್ಲಿರುವ ಕಾರ್ಮಿಕ ಸಂಘಗಳು ವಿರೋಧಿಸಿರುವುದರಿಂದ, ಮಂತ್ರಿತರರು ಶಂಕೆ ವ್ಯಕ್ತಪಡಿಸಿರುವುದರಿಂದ, ಅಲ್ಲಿನ ಕಾರ್ಮಿಕ ಸಂಘಗಳೊಡನೆ ಮತ್ತು ಶಾಸಕರೊಡನೆ ಚರ್ಚಿಸಿ, ನಂತರ ಇದರ ಬಗ್ಗೆ ಸರ್ಕಾರದವರು ನಿರ್ಧಾರ ಕೈಗೊಳ್ಳುತ್ತಾರೆಯೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಪರಿಶೀಲನೆಯಲ್ಲಿದೆ.

ಆ) ಹೌದು.

ಇ) ಆಡಳಿತಾತ್ಮಕ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ.

ಈ) ಎಲ್ಲ ವಿಚಾರಗಳನ್ನೂ ಸಮಗ್ರವಾಗಿ ಪರಿಶೀಲಿಸಲಾಗುವುದು.

ಸಾರ್ವತ್ರಿಕ ಆಸ್ಪತ್ರೆಗೆ ಆಂಬ್ಯುಲೆನ್ಸ್ ಒದಗಿಸುವ ಬಗ್ಗೆ.

೬೩೫ (ಬಿ). ಶ್ರೀ ರಾಮದಾಸ್ (ವಿಧಾನ ಸಭಾ ಸದಸ್ಯರಿಂದ ಚುನಾಯಿತರಾದವರು).—ಮಾನ್ಯ ಆರೋಗ್ಯ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿರುವ ಸಾರ್ವತ್ರಿಕ ಆಸ್ಪತ್ರೆಗೆ ಒಂದು ಆಂಬುಲೆನ್ಸ್ ವಾಹನ ಮತ್ತು ಇ.ಸಿ.ಜಿ. ಯಂತ್ರವನ್ನು ಒದಗಿಸಲು ಸರ್ಕಾರದವರ ಉದ್ದೇಶವೇನಾದರೂ ಇದೆಯೆ;

ಆ) ಹಾಗಿದ್ದಲ್ಲಿ ಸದರಿ ಸೌಲಭ್ಯವನ್ನು ಯಾವಾಗಿನಿಂದ ಒದಗಿಸಲಾಗುವುದು;

ಇ) ಈ ಸೌಲಭ್ಯವನ್ನು ಹೊಸದುರ್ಗದಲ್ಲಿರುವ ಆಸ್ಪತ್ರೆಗೆ ಕೂಡಲೇ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೫೦ ಮತ್ತು ಹೆಚ್ಚು ಹಾಸಿಗೆಗಳು ಸೌಲಭ್ಯವಿರುವ ಆಸ್ಪತ್ರೆಗಳಿಗೆ ಆಂಬ್ಯುಲೆನ್ಸ್ ವಾಹನವನ್ನು ಒದಗಿಸುವ ಉದ್ದೇಶವಿದೆ. ಆದರೆ ಇ.ಸಿ.ಜಿ. ಯಂತ್ರವನ್ನು ಒದಗಿಸುವ ಯೋಜನೆ ಸದ್ಯಕ್ಕೆ ಇಲ್ಲ.